# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕರ್ನಾಟಕ ಕರಾವಳಿ ಮಂಜುಗಡ್ಡೆ ಘಟಕ ಮತ್ತು ಶೈತ್ಯಾಗಾರಗಳು ಬಳಸುವ ವಿದ್ಯುತ್ ಮೇಲೆ ಸಹಾಯಧನ ನೀಡುವ "ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ" ಯೋಜನೆಯನ್ನು ಮಾರ್ಪಡಿಸುವಿಕೆ.

ಓದಲಾಗಿದೆ:-
(1) ಆದೇಶ ಸಂಖ್ಯೆ:ಪಸಂಮೀ/62/ಮೀಇಯೋ/2010, ದಿನಾಂಕ:09-07-2010.
(2) ಆದೇಶ ಸಂಖ್ಯೆ:ಪಸಂಮೀ/116/ಮೀಇಯೋ/2012, ದಿನಾಂಕ:03-09-2012.
(3) ಪತ್ರ ಸಂಖ್ಯೆ:ಮಂಜುಗಡ್ಡೆ/2/2012-13, ದಿನಾಂಕ:28-09-2012.
(4) ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ/252/ವೆಚ್ಚ-4/2012, ದಿನಾಂಕ:26-12-2012.

******

## ಪ್ರಸ್ತಾವನೆ:

ಮೀನುಗಾರಿಕೆಗೆ ಉಪಯೋಗಿಸಲ್ಪಡುವ ಮಂಜುಗಡ್ಡೆ ತಯಾರಿಕಾ ಘಟಕಗಳಿಗೆ ಪ್ರತೀ ಯೂನಿಟ್ ವಿದ್ಯುತ್‌ಗೆ ನೀಡುತ್ತಿರುವ 1 ರೂಪಾಯಿ ಸಹಾಯಧನವನ್ನು ಮುಂದುವರೆಸಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಯವರು 2010-11ರ ಆಯವ್ಯಯ ಭಾಷಣದಲ್ಲಿ ಘೋಷಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, ಕರ್ನಾಟಕದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 180ಕ್ಕೂ ಹೆಚ್ಚು ಮಂಜುಗಡ್ಡೆ ತಯಾರಿಕಾ ಹಾಗೂ ಶೈತ್ಯಾಗಾರ ಘಟಕಗಳು ಮೀನುಗಾರಿಕೆ ಉದ್ದೇಶಕ್ಕೆ ಬಳಸುವ ವಿದ್ಯುತ್ ಮೇಲೆ ಪ್ರತೀ ಯೂನಿಟ್‌ಗೆ ರೂ.1.00ರಂತೆ ಘಟಕ ಒಂದಕ್ಕೆ ಗರಿಷ್ಠ ರೂ.2.00 ಲಕ್ಷಕ್ಕೆ ಸೀಮಿತಗೊಳಿಸಿ ಸಹಾಯಧನ ನೀಡುವ ಯೋಜನೆಗೆ ಇಲಾಖಾ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ, 2010-11ನೇ ಸಾಲಿನಿಂದ ಆದೇಶ ಸಂಖ್ಯೆ:ಪಸಂಮೀ/62/ಮೀಇಯೋ/2010, ದಿನಾಂಕ:09-07-2010ರ ಪ್ರಕಾರ ಪ್ರಾರಂಭಿಸಿರುವ "ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ" ಯೋಜನೆಯಿಂದ ಕರ್ನಾಟಕದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 200ಕ್ಕೂ ಹೆಚ್ಚು ಮಂಜುಗಡ್ಡೆ ತಯಾರಿಕಾ ಹಾಗೂ ಶೈತ್ಯಾಗಾರ ಘಟಕಗಳು ಮೀನುಗಾರಿಕೆ ಉದ್ದೇಶಕ್ಕೆ ಬಳಸುವ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ನೀಡುತ್ತಿದ್ದ ರೂ.1.00ರ ಸಹಾಯಧನ ಮಾರ್ಪಡಿಸಿ ಯೂನಿಟ್ ಒಂದಕ್ಕೆ ರೂ.1.25 ರಂತೆ ಘಟಕ ಒಂದಕ್ಕೆ ಸೀಮಿತಗೊಳಿಸಿದ್ದು, ಸದರಿ ಹೆಚ್ಚಳವು ದಿನಾಂಕ:01-09-2012 ರಿಂದ ಅನ್ವಯವಾಗುವಂತೆ ಆದೇಶ ಸಂಖ್ಯೆ:ಪಸಂಮೀ/62/ಮೀಇಯೋ/2010, ದಿನಾಂಕ:09-07-2010ರಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸಹಾಯಧನ ನೀಡುವ ಯೋಜನೆಗೆ ಪರಿಷ್ಕೃತ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇದರಂತೆ ತ್ರೈಮಾಸಿಕ ಮತ್ತು ವಾರ್ಷಿಕ ಮಿತಿಯನ್ನು ಶೇ.25ರಷ್ಟು ಹೆಚ್ಚಿಸಲಾಗಿತ್ತು.

-2-

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ, ಮೀನುಗಾರಿಕೆ ನಿರ್ದೇಶಕರು ಕರ್ನಾಟಕ ಕರಾವಳಿ ಮಂಜುಗಡ್ಡೆ ಘಟಕ ಮತ್ತು ಶೈತ್ಯಾಗಾರ ಮಾಲೀಕರ ಸಂಘ ನೀಡಿದ ಮನವಿ ಹಿನ್ನೆಲೆಯಲ್ಲಿ ಮಂಜುಗಡ್ಡೆ ಘಟಕ ಮತ್ತು ಶೈತ್ಯಾಗಾರಗಳು ಉಪಯೋಗಿಸುವ ವಿದ್ಯುತ್ ಮೇಲಿನ ಸಹಾಯಧನವನ್ನು ಯೂನಿಟ್-1ಕ್ಕೆ ರೂ.1.00 ರಿಂದ ರೂ.1.25ಕ್ಕೆ ಹಾಗೂ ಪ್ರತಿ ಘಟಕಕ್ಕೆ ವಾರ್ಷಿಕವಾಗಿ ನೀಡುವ ಸಹಾಯಧನದ ಮಿತಿಯನ್ನು ರೂ.2.00 ಲಕ್ಷದಿಂದ ರೂ.2.50 ಲಕ್ಷಕ್ಕೆ ಹೆಚ್ಚಿಸಿ ದಿನಾಂಕ:03-09-2012ರಂದು ಆದೇಶ ಹೊರಡಿಸಲಾಗಿದ್ದು, ಈ ರೀತಿ ಹೆಚ್ಚುವರಿ ಪ್ರಮಾಣವು ಕಡಿಮೆಯಾಗಿದೆ ಎಂದು ಈ ಮೊದಲೇ ವಿನಂತಿಸಿದಂತೆ ಸದರಿ ಸಹಾಯಧನವನ್ನು ದುಪ್ಪಟ್ಟುಪಡಿಸಲು ಕೋರಿಕೆ ಇದ್ದು, ಸದರಿ ಸಂಘದವರ ಮನವಿ ಸಮರ್ಪಕವಾಗಿದ್ದು, ಅವರು ವಿನಂತಿಸಿರುವ ಸಹಾಯಧನದ ಪ್ರಮಾಣವನ್ನು ಇಮ್ಮಡಿಗೊಳಿಸಲು ಮತ್ತೊಮ್ಮೆ ಶಿಫಾರಸ್ಸು ಮಾಡಿರುವುದಾಗಿ ಮತ್ತು ಹೆಚ್ಚುವರಿ ಸಹಾಯಧನವನ್ನು 2012-13ನೇ ಸಾಲಿನಲ್ಲಿ ಒದಗಿಸಿರುವ ರೂ.350.00 ಲಕ್ಷ ಸಾಕಾಗುವುದಿಲ್ಲವಾದ್ದರಿಂದ, ರೂ.250.00 ಲಕ್ಷ ಹೆಚ್ಚುವರಿ ಅನುದಾನ ಒದಗಿಸಬೇಕಾಗುತ್ತದೆಂದು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ, ಕರ್ನಾಟಕ ಕರಾವಳಿ ಮಂಜುಗಡ್ಡೆ ಘಟಕ ಮತ್ತು ಶೈತ್ಯಾಗಾರ ಘಟಕಗಳಿಗೆ ಬಳಸುವ ಪ್ರತಿ ವಿದ್ಯುತ್ ಯೂನಿಟ್‌ಗೆ ನೀಡಲಾಗುವ ಸಹಾಯಧನವನ್ನು ರೂ.1.50ಕ್ಕೆ ಏರಿಸಲು ಹಾಗೂ ತ್ರೈಮಾಸಿಕ ಮಿತಿಯನ್ನು ರೂ.50,000-00 ರಿಂದ ರೂ.75,000-00ಗಳಿಗೆ ಮತ್ತು ವಾರ್ಷಿಕ ಮಿತಿಯನ್ನು ರೂ.2.00 ಲಕ್ಷಗಳಿಂದ ರೂ.3.00 ಲಕ್ಷಗಳಿಗೆ ನಿಗದಿಪಡಿಸಲು ಮತ್ತು ಮಿತಿಯನ್ನು ದಿನಾಂಕ: 01-04-2012 ರಿಂದ ಪೂರ್ವಾನ್ವಯವಾಗಿ ಜಾರಿಗೆ ತರುವಂತೆ ಮುಂದುವರೆದು, ಇದರಿಂದಾಗಿ ಉಂಟಾಗುವ ಹೆಚ್ಚಿನ ಆರ್ಥಿಕ ಹೊರೆಯನ್ನು ಪ್ರಸಕ್ತ ಸಾಲಿನಲ್ಲಿ ಒದಲಾಗಿಸಲಾದ ಅನುದಾನದಿಂದಲೇ ಭರಿಸತಕ್ಕದ್ದು ಎಂಬ ಷರತ್ತನ್ನು ಆರ್ಥಿಕ ಇಲಾಖೆಯು ವಿಧಿಸಿರುತ್ತದೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಹಾಗೂ ಆರ್ಥಿಕ ಇಲಾಖೆಯ ಸಹಮತಿಯಂತೆ ಈ ಕೆಳಕಂಡಂತೆ ಆದೇಶಿಸಿದೆ.

<u>ಆದೇಶ ಸಂಖ್ಯೆ:ಪಸಂಮೀ 116 ಮೀಇಯೋ 2012, ಬೆಂಗಳೂರು ದಿನಾಂಕ:29-12-2012</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಆದೇಶ ಸಂಖ್ಯೆ:ಪಸಂಮೀ/116/ಮೀಇಯೋ/2012, ದಿನಾಂಕ:03-09-2012ರ ಪ್ರಕಾರ "ಮಂಜುಗಡ್ಡೆ ಸ್ಥಾವರಗಳು ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ" ಯೋಜನೆಯಿಂದ ಕರ್ನಾಟಕದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 200ಕ್ಕೂ ಹೆಚ್ಚು ಮಂಜುಗಡ್ಡೆ ತಯಾರಿಕಾ ಹಾಗೂ ಶೈತ್ಯಾಗಾರ ಘಟಕಗಳು ಮೀನುಗಾರಿಕೆ ಉದ್ದೇಶಕ್ಕೆ ಬಳಸುವ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.1.25ರಂತೆ ನೀಡುತ್ತಿದ್ದ ಸಹಾಯಧನವನ್ನು ಮಾರ್ಪಡಿಸಿ ರೂ.1.50ಕ್ಕೆ ಏರಿಸಲು ಹಾಗೂ ತ್ರೈಮಾಸಿಕ ಮಿತಿಯನ್ನು ರೂ.50,000-00 ಗಳಿಂದ ರೂ.75,000-00ಗಳಿಗೆ ಮತ್ತು ವಾರ್ಷಿಕ ಮಿತಿಯನ್ನು ರೂ.2.00 ಲಕ್ಷಗಳಿಂದ ರೂ.3.00 ಲಕ್ಷಗಳಿಗೆ ನಿಗದಿಪಡಿಸಿ, ದಿನಾಂಕ:01-04-2012 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಹಾಗೂ ಆದೇಶ ಸಂಖ್ಯೆ:ಪಸಂಮೀ/62/ಮೀಇಯೋ/2010, ದಿನಾಂಕ:09-07-2010ರಲ್ಲಿ ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಹಾಗೂ ಈ ಪರಿಷ್ಕರಣೆಯಿಂದ ಉಂಟಾಗುವ ಹೆಚ್ಚಿನ ಆರ್ಥಿಕ ಹೊರೆಯನ್ನು 2012-13ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಗೆ ಒದಗಿಸಲಾದ ಅನುದಾನದಿಂದಲೇ ಭರಿಸಬೇಕೆಂಬ ಷರತ್ತನ್ನು ವಿಧಿಸಿ ಸಹಾಯಧನ ನೀಡುವ ಯೋಜನೆಗೆ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/252/ವೆಚ್ಚ-4/2012 ದಿನಾಂಕ:30-11-2012 ಮತ್ತು ದಿನಾಂಕ:26-12-2012ರ ಅನಧಿಕೃತ ಟಿಪ್ಪಣಿಯಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಂ.ರಾಜಪ್ಪ) 29/12/12
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ)(ಎಂಯು-1 ಮತ್ತು 2), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
5) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
7) ಸಮನ್ವಯ/ವಾರಪತ್ರಿಕೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.